**ದಿಃ25.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಬಿ.ಜಿ.ಎಸ್ ವಕೀಲರಿಂದಃ

ದಾವಾ ಐಟಂ ನಂಬರ್ 1ರ ಸರ್ವೆ ನಂಬರ್ ಈಗ ಸರ್ವೆ ನಂಬರ್ 474/17 ಎಂದು ಬದಲಾವಣೆ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಲಕ್ಷ್ಮೀ ನಾರಾಯಣ ಕಾಂಪ್ಲೆಕ್ಸ್ ಇದೆ ಎಂದರೆ ನಿಜ.

ದಾವಾ ಆಸ್ತಿಗಳಲ್ಲಿ ಯಾವ ಆಸ್ತಿಗಳು ಯಾವ ರೀತಿ ಬಂತು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇದೆ ಎಂದರೆ ನಿಜ.

ನನ್ನ ತಂದೆ ಎಲ್ಲಾ ಜಮೀನುಗಳ ಮೇಲೆ ದಾವೆಗಳನ್ನು ಹಾಕುತ್ತಿದ್ದರು ಎಂದರೆ ಸಾಕ್ಷಿ ನಿಜ ಆದರೆ ನನಗೆ ವಿಷಯ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯವರು ಇಬ್ರಾಹಿಂ ಎನ್ನುವವರ ವಿರುದ್ಧ ಸ್ವಾಧೀನ ಕೇಳಿ ದಾವೆ ಹಾಕಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ಹಾಕಿದ ವಿಚಾರ ನನ್ನ ತಂದೆ ತಮ್ಮ ಹೇಳಿಕೆಯಲ್ಲಿ ತಿಳಿಸಿದ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನೋಡಿರುವುದಾಗಿ ನುಡಿಯುತ್ತಾರೆ.

ಲಕ್ಷ್ಮೀ ನಾರಾಯಣ ಕಾಂಪ್ಲೆಕ್ಸ್ ಕಟ್ಟುವ ಸಮಯದಲ್ಲಿ ಸದರಿ ಜಮೀನನ್ನು ಬ್ಯಾಂಕಿಗೆ ಅಡ ಇಟ್ಟಿದ್ದರು ಎಂದರೆ ಸುಳ್ಳು. ಪ್ರತಿವಾದಿಯರು ಸದರಿ ವಿಚಾರವನ್ನು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಏನು ತಿಳಿಸಿದ್ದಾರೆ ಎಂದು ವಕೀಲರ ಮೂಲಕ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ವಿವಾದಿತ ಮರಣ ಶಾಸನದಲ್ಲಿ ಎರಡನೇಯ ವಾದಿಯ ಮಗಳಿಗೆ ಮದುವೆ ಸಮಯದಲ್ಲಿ ಹಣ ನೀಡಬೇಕೆಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಹಣ ನೀಡಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ 7ನೇ ಪ್ರತಿವಾದಿಯ ಮಗಳಿಗೆ ಹಣ ನೀಡಬೇಕೆಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮರಣ ಶಾಸನದಲ್ಲಿ ಯಾರು ಹಣ ನೀಡಬೇಕು ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದ ಪ್ರಕಾರ 2 ಮತ್ತು 3ನೇ ಪ್ರತಿವಾದಿಗಳು ಹಣ ನೀಡಿ ರಸೀದಿ ಪಡೆದಿದ್ದಾರೆ ಎಂದು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ದಾಖಲೆ ರಸೀದಿ ಆಗಿದ್ದು ಸದರಿ ದಾಖಲೆಯಲ್ಲಿರುವ ಸಹಿ 7ನೇ ಪ್ರತಿವಾದಿಯದು ಎಂದು ಕೇಳಲಾಗಿ ಸಾಕ್ಷಿ ಗೊತ್ತಾಗುವುದಿಲ್ಲ

ಎಂದು ತಿಳಿಸುತ್ತಾರೆ. ಅದೇ ರೀತಿ ಸಾಕ್ಷಿಗೆ ಮತ್ತೊಂದು ರಸೀದಿ ತೋರಿಸಿ ಅದರಲ್ಲಿರುವ ಸಹಿ 2ನೇ ವಾದಿಯದು ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ತಿಳಿಸುತ್ತಾರೆ. ಸಾಕ್ಷಿಗೆ 7ನೇ ಪ್ರತಿವಾದಿಯ ವಕಾಲತ್ ನಲ್ಲಿರುವ ಸಹಿ 7ನೇ ಪ್ರತಿವಾದಿಯದು ಎಂದು ಕೇಳಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2 ಮತ್ತು 3ನೇ ಪ್ರತಿವಾದಿಯರು ಮರಣ ಶಾಸನದ ಪ್ರಕಾರ ಹಣ ನೀಡಿರುತ್ತಾರೆ ಎಂದರೆ ಸುಳ್ಳು.

ನನ್ನ ತಂದೆಯವರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಅವರ ಜೀವಿತ ಕಾಲದಲ್ಲಿ ಚೆನ್ನಾಗಿತ್ತು ಎಂದರೆ ಸುಳ್ಳು. ನನ್ನ ತಂದೆಯವರು ಮಾಡಿದ್ದಾರೆ ಎಂದು ಹೇಳಲಾದ ಮರಣ ಶಾಸನ ದೃಡೀಕೃತ ನಕಲನ್ನು ನಾನು ಪಡೆದಿದ್ದೇನೆ ಎಂದು ತಿಳಿಸಿದ್ದು ಅದರ ಕಾಪಿ ಈಗ ಎಲ್ಲಿದೆ ಎಂದರೆ ಸಾಕ್ಷಿ ವಕೀಲರಿಗೆ ನೀಡಿರುವುದಾಗಿ ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಅಥವಾ ವಕೀಲರು ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಈ ವ್ಯಾಜ್ಯ ಹಾಕಿದ್ದೇನೆ ಎಂದರೆ ಸಾಕ್ಷಿ ತನಗೂ ಹಕ್ಕು ಇರುವ ಕಾರಣ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಮರಣ ಶಾಸನದ ಆಧಾರದಲ್ಲಿ ಕಂದಾಯ ದಾಖಲೆಗಳೂ ಸಹ ಬದಲಾವಣೆ ಆಗಿದೆ ಎಂದರೆ ಸುಳ್ಳು. ಸದರಿ ಮರಣ ಶಾಸನದ ಪ್ರಕಾರ ಪಕ್ಷಗಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ನಾನು ಮರಣ ಶಾಸನ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

ನನ್ನ ತಂದೆಯವರು ಮೃತ ಪಟ್ಟ ನಂತರ ಹಲವು ಕಾರ್ಯಕ್ರಮಗಳು ನಡೆದಿವೆ ಎಂದರೆ ನಿಜ. ಸದರಿ ಕಾರ್ಯಕ್ರಮಕ್ಕೆ ನಾನು ಹಾಗೂ ನನ್ನ ಸಹೋದರರು ಹಾಗೂ ಅವರ ಮಕ್ಕಳು ಹಾಜರಾಗಿರುತ್ತಾರೆ ಎಂದರೆ ಸಾಕ್ಷಿ ತಾನು ಹಾಜರಾಗಿಲ್ಲ, ಹರಿದ್ವಾರಕ್ಕೆ ಹೋಗಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ತಮ್ಮ ತಕರಾರಿನಲ್ಲಿ ಯಾವ ಯಾವ ಕಾರ್ಯಕ್ರಮಕ್ಕೆ ಹಾಜರಾಗಿದ್ದೆ ಎಂದು ತಿಳಿಸಿರುವ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ವಿವಾದಿತ ಮರಣ ಶಾಸನವನ್ನು ನಾನು ಓದಿದ್ದೇನಾ ಎಂದರೆ ಸಾಕ್ಷಿ ಓದಿದ್ದೇನೆ, ಸಾಕ್ಷಿ ಸ್ವತಃ ಆಗಿ ನುಡಿಯುತ್ತಾರೆ, ಆದರೆ ಸಹಿ ತನ್ನ ತಂದೆಯದಲ್ಲ. ಸದರಿ ಮರಣ ಶಾಸನಕ್ಕೆ ಯಾರು ಸಾಕ್ಷಿ ಹಾಕಿದ್ದಾರೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರರು ವಿಟ್ಲ ಪೇಟೆಯಲ್ಲಿ ಅಂಗಡಿ ವ್ಯವಹಾರ ಮಾಡುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರರು ಈಗ ಇದ್ದಾರಾ ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಮರಣ ಶಾಸನಕ್ಕೆ ಸಾಕ್ಷಿದಾರರು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ನನ್ನ ಪ್ರಕಾರ ಜೀವಂತ ಇದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಾಗಿದ್ದ ಸಮಯದಲ್ಲಿ ವಿವಾದಿತ ಮರಣ ಶಾಸನ ಮಾಡಿರುತ್ತಾರೆ ಎಂದರೆ ಸುಳ್ಳು.

ನನ್ನ ಸಹೋದರರು ಲಕ್ಷ್ಮೀ ನಾರಾಯಣ ಕಾಂಪ್ಲೆಕ್ಸ್ ಕಟ್ಟಲು ಹಣ ಎಲ್ಲಿಂದ ಪಡೆದಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಎಲ್ಲ ಅಕ್ಕ ತಂಗಿಯರು ಸೇರಿ ಕಟ್ಟಿಸಿರುವುದಾಗಿ ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಉದ್ದೇಶಪೂರಕವಾಗಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸುಳ್ಳು.

3ನೇಯ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**